(ಆ) ಸಾರ್ವಜನಿಕರು ಅಥವಾ ಸ್ವಯಂಸೇವಾ ಸಂಸ್ಥೆಗಳು ಮುಂದೆ ಬಂದಲ್ಲಿ ಶಾಲಾ ಕಟ್ಟಡ ನಿರ್ಮಾಣದಲ್ಲಿ ಹಾಗೂ ವಿಶ್ವಬ್ಯಾಂಕ್ ನೆರವಿನಿಂದ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರು ಸರಬರಾಜು ಯೋಜನೆಗಳಿಗೆ ಕ್ರಮವಾಗಿ ಅಂದಾಜು ಪೆಚ್ಚಿದ ಶೇ. ೫೦ ಮತ್ತು ಶೇ. ೭೦ ರಷ್ಟು ಹಣವನ್ನು ಸರ್ಕಾರ ಭರಿಸುತ್ತದೆ. ಈ ವ್ಯವಸ್ಥೆ ಎಲ್ಲಾ ಜಿಲ್ಲೆಗಳಿಗೆ ಅನ್ವಯಿಸುತ್ತದೆ.

(ಇ) ಜಿಲ್ಲಾ ಪಂಚಾಯತ್ ಹಾಗೂ ಗ್ರಾಮ ಪಂಚಾಯತ್‌ಗಳಿಂದ ಕಾಮಗಾರಿಗಳು ಅನುಮೋದಿತವಾಗಿದ್ದು ಅದೇ ಕೆಲಸಕ್ಕೆ ಸಾರ್ವಜನಿಕರು ನಗದು ಅಥವಾ ವಸ್ತು ರೂಪದ ಸಹಾಯ ನೀಡಿದರೆ ಅಂತಹ ಕಾಮಗಾರಿಗಳಿಗೆ ಹೆಚ್ಚಿಂದಾಣಿಕೆ ಖರ್ಚನ್ನು ಜಿಲ್ಲಾ ಪಂಚಾಯತ್ ಭರಿಸಿದೆ.

(ಈ) ಅದು ಸಾರ್ವಜನಿಕರ ತೊಡಗುವಿಕೆಯನ್ನು ಅವಲಂಬಿಸಿರುತ್ತದೆ.

ಕೊಡಗು ಜಿಲ್ಲೆಯಲ್ಲಿ ಕೊಳವೆ ಬಾವಿಗಳ ಬಗ್ಗೆ

೫೦೩.(೬೧೪) ಶ್ರೀಮತಿ ಸುಮಾ ವಸಂತ (ವೀರಾಜಪೇಟೆ).—ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

(ಅ) ೧೯೯೩–೯೪ನೇ ಸಾಲಿನಲ್ಲಿ ಕೊಡಗು ಜಿಲ್ಲೆಯಲ್ಲಿ ಮಂಜೂರಾದ ಕೊಳವೆ ಬಾವಿಗಳು ಎಷ್ಟು?

(ಆ) ಅವುಗಳಲ್ಲಿ ಉಪಯೋಗಕ್ಕೆ ಬರುವ ಕೊಳವೆ ಬಾವಿಗಳು ಎಷ್ಟು? ಹಾಗೂ ಉಪಯೋಗಕ್ಕೆ ಬಾರದ ಕೊಳವೆ ಬಾವಿಗಳು ಎಷ್ಟು? (ತಾಲ್ಲೂಕುವಾರು ವಿವರ ಕೊಡಿ)

(ಇ) ಫಲಕಾರಿಯಲ್ಲದ ಕೊಳವೆ ಬಾವಿಗಳನ್ನು ತೋಡಲು ಕಾರಣವೇನು?

(ಈ) ತಜ್ಞರಿಂದ ಆ ಜಾಗ ಪರಿಶೀಲನೆ ಮಾಡಲಿಲ್ಲವೆ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು).—

(ಅ) ೧೬೨.

(ಆ) ಫೆಬ್ರುವರಿ ೧೯೯೪ರ ಅಂತ್ಯದವರೆಗೆ ೧೫೧ ಕೊಳವೆ ಬಾವಿಗಳನ್ನು ಕೊರೆಯಲಾಗಿದೆ. ಅವುಗಳಲ್ಲಿ ೧೩೫ ಕೊಳವೆ ಬಾವಿಗಳು ಉಪಯೋಗಕ್ಕೆ ಬರುತ್ತವೆ. ೧೬ ಕೊಳವೆ ಬಾವಿಗಳು ಉಪಯೋಗಕ್ಕೆ ಬರುವುದಿಲ್ಲ. ತಾಲ್ಲೂಕುವಾರು ವಿವರ ಈ ರೀತಿ ಇದೆ ;

ತಾಲ್ಲೂಕು	ಉಪಯೋಗಕ್ಕೆ ಬರುವ ಕೊಳವೆ ಬಾವಿಗಳು	ಉಪಯೋಗಕ್ಕೆ ಬಾರದ ಕೊಳವೆ ಬಾವಿಗಳು
೧ ಮಡಿಕೇರಿ	೩೧	೨
೨ ಸೋಮವಾರಪೇಟೆ	೪೮	೪
೩ ವೀರಾಜಪೇಟೆ	೫೬	೧೦
	೧೩೫	೧೬

(ಇ) ಕಠಿಣಾತ್ಮಕ (ಹಾರ್ಡ್‌ಕೋರ್) ಪ್ರದೇಶವಾಗಿರುವುದರಿಂದ ಕೆಲವು ಕೊಳವೆ ಬಾವಿಗಳು ವಿಫಲವಾಗಿವೆ.

(ಈ) ಭೂವಿಜ್ಞಾನಿಗಳಿಂದ ಪರಿಶೀಲನೆ ಮಾಡಲಾಗಿದೆ.